# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ (ನಿ.), ಶಿವಮೊಗ್ಗ


ಎ.ಪಿ.ಎಂ.ಸಿ. ಯಾರ್ಡ್, ಸಾಗರ ರಸ್ತೆ, ಶಿವಮೊಗ್ಗ – 577 204

ದೂ.ಸಂ.: 08182–250513, 250514 ಇ–ಮೇಲ್ : homamcos@gmail.com ವೆಬ್‌ಸೈಟ್ : www.mamcos.info


॥ ಸ್ವಸ್ಥಸ್ಯ ಸ್ವಾಸ್ಥ್ಯ ರಕ್ಷಣಂ, ಆತುರಸ್ಯ ವಿಕಾರ ಪ್ರಶಮನಮ್ ॥ – (ಚರಕ ಸಂಹಿತೆ)

## ಸದಸ್ಯರ ಆರೋಗ್ಯ ವಿಮಾ ಯೋಜನೆ

ಮಾನ್ಯ ಸದಸ್ಯರೇ,

ತಮ್ಮೆಲ್ಲರ ನೆಚ್ಚಿನ 'ಮಾಮ್‌ಕೋಸ್' ಸಂಸ್ಥೆಯು ತನ್ನ ಸದಸ್ಯರಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಅದರಲ್ಲಿ 'ಆರೋಗ್ಯ ವಿಮಾ ಯೋಜನೆ'ಯೂ ಒಂದಾಗಿರುವುದು ತಮಗೆಲ್ಲಾ ತಿಳಿದ ಸಂಗತಿಯಾಗಿದೆ. ಅನೇಕ ಗಂಭೀರ ಕಾಯಿಲೆಗಳಿಗೆ ಹಾಗೂ ಈಗಿನ ಕೊರೋನಾ ಹೆಮ್ಮಾರಿಯಂತಹ ಮಾರಣಾಂತಿಕ ಕಾಯಿಲೆಗೆ ಬರುವ ದುಬಾರಿ ವೈದ್ಯಕೀಯ ವೆಚ್ಚವನ್ನು ಭರಿಸುವುದು ಬಹಳ ಕಷ್ಟವಾಗಿರುವುದನ್ನು ಮನಗಂಡ 'ಮಾಮ್‌ಕೋಸ್' ಸಂಸ್ಥೆಯು ಸದಸ್ಯರ ಒತ್ತಾಸೆಯ ಮೇರೆಗೆ ಈ 'ಆರೋಗ್ಯ ವಿಮಾ ಯೋಜನೆ'ಯನ್ನು ಮತ್ತೊಮ್ಮೆ ಮುಂದುವರೆಸಿರುತ್ತದೆ.

ಈ ಬಾರಿ ಸದಸ್ಯ ಮತ್ತು ಅವರ ಪತಿ/ಪತ್ನಿ ಮಾತ್ರವಲ್ಲದೆ ಸದಸ್ಯರ ತಂದೆ/ತಾಯಿ, ಅವಲಂಬಿತ ಸಹೋದರ ಮತ್ತು ಅವಿವಾಹಿತ ಸಹೋದರಿ/ಮಗ/ಸೊಸೆ/ಮೊಮ್ಮಕ್ಕಳು (ಮಗನ ಮಕ್ಕಳು)/ಅವಿವಾಹಿತ ಮಗಳಿಗೂ ಈ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಿದ್ದು, ಎಲ್ಲಾ ಕಾಯಿಲೆಗಳಿಗೆ ಅಥವಾ ಅಪಘಾತದಿಂದ ಉಂಟಾಗುವ ಯಾವುದೇ ಅವಘಡಗಳಿಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ಕನಿಷ್ಠ ೩೦ ಗಂಟೆಗಿಂತ ಹೆಚ್ಚು ಸಮಯ ಒಳರೋಗಿಯಾಗಿ ದಾಖಲಾದಾಗ ತಗಲುವ ಎಲ್ಲಾ ರೀತಿಯ ಶಸ್ತ್ರ ಚಿಕಿತ್ಸೆ ವೆಚ್ಚ, ಆಸ್ಪತ್ರೆಯ ವೆಚ್ಚ ಮತ್ತು ಔಷಧೋಪಚಾರ ವೆಚ್ಚಗಳನ್ನು ಒಳಗೊಂಡಿರುತ್ತದೆ.

| ವಯೋಮಿತಿ | ವಿಮಾ ಕಂತು ಮೊತ್ತ | ಪರಿಹಾರ ಮೊತ್ತ | ವಿಮಾ ಕಂತು ಸಂಗ್ರಹಿಸುವ ದಿನಾಂಕ | ಯೋಜನೆ ಜಾರಿಯಲ್ಲಿರುವ ಅವಧಿ |
|---|---|---|---|---|
| ಸದಸ್ಯ/ಪತ್ನಿ/ಪತಿ/ತಂದೆ/ತಾಯಿ/ಅವಲಂಬಿತ ಸಹೋದರ/ಅವಿವಾಹಿತ ಸಹೋದರಿ/ ಮಗ/ಸೊಸೆ/ ಮೊಮ್ಮಕ್ಕಳು (ಮಗನ ಮಕ್ಕಳು) ಅವಿವಾಹಿತ ಮಗಳು (ಒಟ್ಟಾರೆ 3 ತಿಂಗಳ ಮಗುವಿನಿಂದ 80 ವರ್ಷದೊಳಗಿನ ವಯೋಮಾನದವರು) | ರೂ. 4,100/– ತಲಾ ಒಬ್ಬರಿಗೆ | ಆಸ್ಪತ್ರೆ ಚಿಕಿತ್ಸಾ ವೆಚ್ಚ ತಲಾ ಒಬ್ಬರಿಗೆ ರೂ. 4,00,000/– ದವರೆಗೆ | 01/07/2021 ರಿಂದ 30/08/2021 ರವರೆಗೆ | 01/09/2021 ರಿಂದ 31/08/2022 ರವರೆಗೆ |

ಸಂಘದಿಂದ ವಿಮಾ ಮೊತ್ತವನ್ನು ವಿಮಾ ಕಂಪನಿಗೆ ಪಾವತಿಸಿದ ಮರುದಿನದಿಂದಲೇ ವಿಮಾ ಸೌಲಭ್ಯಗಳು ದೊರೆಯುತ್ತದೆ.

### ವಿಮೆ ಪರಿಹಾರ ವ್ಯಾಪ್ತಿಯಲ್ಲಿ ಬರುವ ಸವಲತ್ತುಗಳು

1 ಈ ಯೋಜನೆಯಲ್ಲಿ ಆರೋಗ್ಯ ವಿಮಾ ಸೌಲಭ್ಯ ಪಡೆಯಲು ರೋಗಿಯು ಕನಿಷ್ಠ 30 ಗಂಟೆಗಿಂತ ಹೆಚ್ಚು ಸಮಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಬೇಕಾಗಿರುತ್ತದೆ.

2 ಆಸ್ಪತ್ರೆ ರೂಂ ಬಾಡಿಗೆ ಹಾಗೂ ನರ್ಸಿಂಗ್ ವೆಚ್ಚಗಳಿಗೆ ಸಂಬಂಧಿಸಿದಂತೆ ಸಮ್‌ಇನ್‌ಶ್ಯೂರ್ಡ್‌ನ ಶೇಕಡ 1 ರಂತೆ ಪ್ರತಿ ದಿನಕ್ಕೆ ಕೊಡಲಾಗುವುದು.

3 ಐ.ಸಿ.ಯು ಅಥವಾ ಐ.ಸಿ.ಸಿ.ಯು ವೆಚ್ಚಗಳಿಗೆ ಸಂಬಂಧಿಸಿದಂತೆ ಸಮ್‌ಇನ್‌ಶ್ಯೂರ್ಡ್‌ನ ಶೇಕಡ 2 ರಂತೆ ಪ್ರತಿ ದಿನಕ್ಕೆ ಕೊಡಲಾಗುವುದು.

4 ಸರ್ಜನ್, ಅನಸ್ತೇಷಿಯ ಕೊಡುವವರು ಮತ್ತು ತಜ್ಞ ಸಲಹೆಗಾರರ ವೆಚ್ಚ, ಅನಸ್ತೇಷಿಯ, ರಕ್ತ, ಆಕ್ಸಿಜನ್, ಆಪರೇಷನ್ ಥಿಯೇಟರ್ ವೆಚ್ಚ, ಸರ್ಜಿಕಲ್ ಸಲಕರಣೆಗಳು, ಔಷಧಗಳು, ಡಯಾಲಿಸಿಸ್, ಕೀಮೋಥೆರಪಿ, ರೇಡಿಯೋ–ಥೆರಪಿ, ಕೃತಕ ಕಾಲುಗಳ ವೆಚ್ಚ, ಅಂಗವೈಕಲ್ಯತೆಗೆ ಹಾಕುವ ಉಪಕರಣಗಳು, ಶಸ್ತ್ರ ಚಿಕಿತ್ಸೆಯ ಮೂಲಕ ಹಾಕುವ ಫೇಸ್ ಮೇಕರ್ ಉಪಕರಣ ಹಾಗೂ ಖಾಯಿಲೆಗೆ ಸಂಬಂಧಪಟ್ಟಂತೆ ಲ್ಯಾಬೋರೇಟರಿ/ಡಯಾಗ್ನಸ್ಟಿಕ್ ಪರೀಕ್ಷೆ/ಎಕ್ಸ್–ರೇ ಮತ್ತು ಇತರೆ ವೈದ್ಯಕೀಯ ಉಪಚಾರಗಳಿಗೆ ಸಂಬಂಧಪಟ್ಟ ವೆಚ್ಚಗಳು.

5 ಆಸ್ಪತ್ರೆಗೆ ಸೇರುವ 30 ದಿನ ಮುಂಚಿನ ಹಾಗೂ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರದ 60 ದಿನಗಳ ವೈದ್ಯಕೀಯ ವೆಚ್ಚ/ಖರ್ಚುಗಳು.

6 ಆಯುರ್ವೇದ/ಹೋಮಿಯೋಪತಿ/ಯುನಾನಿ/ಆಯುಷ್ ಚಿಕಿತ್ಸೆಗಳಿಗೆ ಸಮ್‌ಇನ್‌ಶ್ಯೂರ್ಡ್‌ನ ಶೇಕಡ 25 ರಂತೆ, ಇದನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಅಥವಾ ಸರ್ಕಾರದಿಂದ ಅನುಮೋದಿಸಲ್ಪಟ್ಟ ಖಾಸಗಿ ಆಸ್ಪತ್ರೆಗಳು ಅಥವಾ ಆಯುರ್ವೇದ ಇನ್‌ಸ್ಟಿಟ್ಯೂಟ್‌ನಲ್ಲಿ ಚಿಕಿತ್ಸೆಯನ್ನು ಪಡೆದಿರಬೇಕು.

7 ಆಂಬ್ಯುಲೆನ್ಸ್ ಸೇವೆಗಾಗಿ ಗರಿಷ್ಠ ರೂ.2,500/– ಮೊಬಲಗನ್ನು ಕೊಡಲಾಗುವುದು. ಈ ವೆಚ್ಚವನ್ನು ರೋಗಿಯನ್ನು ಮನೆಯಿಂದ ಆಸ್ಪತ್ರೆಗೆ ಅಥವಾ ಅಪಘಾತ ಸಂಭವಿಸಿದ ಸ್ಥಳದಿಂದ ಆಸ್ಪತ್ರೆಗೆ ಸೇರಿಸುವಾಗ ಅಥವಾ ಆಸ್ಪತ್ರೆಯಿಂದ ಆಸ್ಪತ್ರೆಗೆ ಪೂರ್ಣ ಪ್ರಮಾಣದಲ್ಲಿ ಅನುಕೂಲವಿರುವ ಆಂಬ್ಯುಲೆನ್ಸ್ ವಾಹನದಲ್ಲಿ ಉತ್ತಮ ವೈದ್ಯಕೀಯ ಅವಕಾಶಗಳಿಗಾಗಿ ತಗಲುವ ವೆಚ್ಚ.

8 ನಗದು ರಹಿತ ಚಿಕಿತ್ಸೆ ವೆಚ್ಚ :– ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಾಗ ಈ ಸೌಲಭ್ಯ ದೊರೆಯುತ್ತದೆ. ಆಸ್ಪತ್ರೆಯ ಮಾಹಿತಿಗಳು **www.mediassist.in** ಮತ್ತು ಸಂಘದ ವೆಬ್‌ಸೈಟ್‌ನಲ್ಲಿ **www.mamcos.info** ದಲ್ಲಿ ಸಿಗುತ್ತದೆ

9 ನೆಟ್‌ವರ್ಕ್ ಇಲ್ಲದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಾಗ ಆಸ್ಪತ್ರೆಯ ಎಲ್ಲಾ ದಾಖಲಾತಿಗಳನ್ನು ಮೂಲ ಪ್ರತಿಯಲ್ಲಿ ನೀಡಿದಾಗ ಈ ಸೌಲಭ್ಯ ದೊರೆಯುತ್ತದೆ

10 ಡಯಾಗ್ನಸ್ಟಿಕ್, ಎಕ್ಸ್–ರೇ, ಲ್ಯಾಬ್ ಪರೀಕ್ಷೆಗಳು ಕಾಯಿಲೆಗೆ ಪೂರಕವಾದ ರಿಪೋರ್ಟ್‌ಗಳು ಪಾಸಿಟಿವ್ ಇದ್ದರೆ ಮಾತ್ರ, ಅದರಿಂದಾಗಿ ರೋಗಿಯು ಆಸ್ಪತ್ರೆ ಅಥವಾ ನರ್ಸಿಂಗ್ ಹೋಂ ಗೆ ಸೇರಿದಾಗ ತಗಲುವ ಖರ್ಚುಗಳಿಗೆ ಮಾತ್ರ ವಿಮಾ ಸೌಲಭ್ಯ ಬರುತ್ತದೆ.

11 ಯಾವುದೇ ಪ್ರಾಣಿ, ಪಕ್ಷಿ, ನಾಯಿ, ಹಾವು, ಜೇನುಹುಳ ಇವುಗಳಿಂದ ಕಚ್ಚಲ್ಪಟ್ಟರೆ ವಿಮಾ ಕಂಪನಿಯು ಅದಕ್ಕೆ ಸಂಬಂಧ ಪಟ್ಟ ಖರ್ಚು ವೆಚ್ಚಗಳನ್ನು ಭರಿಸುತ್ತದೆ.

12 ವಿಮಾದಾರನು ವಿಮೆ ವ್ಯಾಪ್ತಿಗೆ ಬರುವ ಮೊದಲೇ ಇರುವ ಕಾಯಿಲೆಗಳಿಗೆ ಅಥವಾ ಅನಾರೋಗ್ಯಕ್ಕಾಗಿ ಆಪರೇಷನ್ ಮಾಡಬೇಕಾದಲ್ಲಿ ಅದು ಕೂಡ ವಿಮಾ ವ್ಯಾಪ್ತಿಯಲ್ಲಿ ಬರುತ್ತದೆ.

13 ಸದಸ್ಯ/ಪತ್ನಿ/ಪತಿ/ತಂದೆ/ತಾಯಿ/ಅವಲಂಬಿತ ಸಹೋದರ/ಅವಿವಾಹಿತ ಸಹೋದರಿ/ ಮಗ/ಸೊಸೆ/ಮೊಮ್ಮಕ್ಕಳು (ಮಗನ ಮಕ್ಕಳು) /ಅವಿವಾಹಿತ ಮಗಳಿಗೂ ಭಾರತದ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು.

14 ಯಾವುದೇ ಖಾಯಿಲೆ/ಅನಾರೋಗ್ಯ/ಕಣ್ಣು ಪೊರೆ/ಕಣ್ಣು, ಕಿವಿ, ಮೂಗು, ಗಂಟಲು, ಹರ್ನಿಯಾ, ಪೈಲ್ಸ್, ಮೂತ್ರಕೋಶದಲ್ಲಿ ಕಲ್ಲುಗಳು, ವೆರಿಕೋಸ್ ವೈನ್ಸ್, ಅಲ್ಸರ್ಸ್, ಹೈಡ್ರೋಸೀಲ್, ಗರ್ಭಕೋಶ, ಹೈಪರ್‌ಟ್ರೋಫಿ, ಪ್ರಾಸ್ಟ್ರೈಟ್‌ಗಳಿಗೆ ಸಂಬಂಧಪಟ್ಟಂತಹ ಶಸ್ತ್ರ ಚಿಕಿತ್ಸೆಗಳಿಗೆ ಮೊದಲನೇ ವರ್ಷದಿಂದಲೇ ವಿಮಾ ಸೌಲಭ್ಯ ದೊರೆಯುತ್ತದೆ.

15 ಎಲ್ಲಾ ರೀತಿಯಾ ವೈರಲ್ ರೋಗಗಳಿಗೂ (ಅಂದರೆ ಕೋವಿಡ್ ಕಾಯಿಲೆಯೂ ಸೇರಿದಂತೆ) ತಗಲುವ ಆಸ್ಪತ್ರೆ ವೆಚ್ಚವನ್ನು ಭರಿಸಲಾಗುವುದು.

16 ಈ ವಿಮೆಯಲ್ಲಿ ಅಂಗಾಂಗ ಕಸಿಗೆ ತಗಲುವ ವೆಚ್ಚ ಕೂಡ ದೊರೆಯುತ್ತದೆ (ಅಂಗಾಂಗದ ಮೊಬಲಗು ಸೇರುವುದಿಲ್ಲ) ಹಾಗೂ ಇದರಲ್ಲಿ ಅಂಗಾಂಗ ಕೊಡುವ ವ್ಯಕ್ತಿಗೆ (**Donar**) ತಗಲುವ ಆಸ್ಪತ್ರೆ ವೆಚ್ಚ ಹಾಗೂ ರೋಗಿಗೆ ತಗಲುವ ವೆಚ್ಚ ಸೇರಿ ಸಮ್‌ಇನ್‌ಶ್ಯೂರ್ಡ್ ಮೀರದಂತೆ ಕೊಡಲಾಗುತ್ತದೆ.

17 ನೆಟ್‌ವರ್ಕ್ ಆಸ್ಪತ್ರೆಯಲ್ಲಿ ರೋಗಿಯು ಸೇರದೆ ಬೇರೆ ಆಸ್ಪತ್ರೆಗಳಲ್ಲಿ ಸೇರಿ ಚಿಕಿತ್ಸೆ ಪಡೆದಾಗ ಕೂಡ ಈ ಸೌಲಭ್ಯ ದೊರೆಯುತ್ತದೆ.

18 ವಿಮಾದಾರನು ಆಸ್ಪತ್ರೆಗೆ ದಾಖಲಾದಾಗ ಶೇಕಡ 1 ರಂತೆ ಇರುವ ರೂಂ ಬಾಡಿಗೆ, ನರ್ಸಿಂಗ್ ವೆಚ್ಚಗಳು ಬರುತ್ತದೆ. ಆದರೆ ಹೆಚ್ಚುವರಿ ರೂಂ ಬಾಡಿಗೆಯಲ್ಲಿ ಇದ್ದರೆ, ವಿಮಾ ಕಂಪನಿಯು ಅನಸ್ತೇಷಿಯ, ರಕ್ತ, ಆಕ್ಸಿಜನ್, ಆಪರೇಷನ್ ಥಿಯೇಟರ್ ವೆಚ್ಚ, ಸರ್ಜಿಕಲ್ ಸಲಕರಣೆಗಳು, ಡಯಾಲಿಸೀಸ್, ಕೀಮೋಥೆರಪಿ, ರೇಡಿಯೋ-ಥೆರಪಿ, ಕೃತಕ ಅಂಗಾಂಗ ವೆಚ್ಚ, ಅಂಗವೈಕಲ್ಯತೆಗೆ ಹಾಕುವ ಉಪಕರಣಗಳು, ಶಸ್ತ್ರ ಚಿಕಿತ್ಸೆಯ ಮೂಲಕ ಹಾಕುವ ಫೇಸ್ ಮೇಕರ್ ಉಪಕರಣ ಹಾಗೂ ಖಾಯಿಲೆಗೆ ಸಂಬಂಧಪಟ್ಟಂತೆ ಲ್ಯಾಬೋರೇಟರಿ/ಡಯಾಗ್ನಸ್ಟಿಕ್ ಪರೀಕ್ಷೆ/ಎಕ್ಸ್-ರೇ ಮತ್ತು ಇತರೆ ವೈದ್ಯಕೀಯ ಸಂಬಂಧಪಟ್ಟ ವೆಚ್ಚಗಳು, ರೂಂ ಬಾಡಿಗೆ, ನರ್ಸಿಂಗ್ ವೆಚ್ಚ ಇದರ ಹೆಚ್ಚುವರಿ ಶೇಕಡ ಕಡಿತಗೊಳಿಸಿ ಪರಿಹಾರ ಕೊಡಲಾಗುತ್ತದೆ. (**Proportionate deductions**)

19 ತಲಾ ಒಂದು ಕಣ್ಣಿನ ಶಸ್ತ್ರ ಚಿಕಿತ್ಸೆಗೆ ರೂ. 25,000/- ಗಳವರೆಗೆ ಸೌಲಭ್ಯ ದೊರೆಯುತ್ತದೆ.

20 ನೋಂದಾಯಿತ ಸದಸ್ಯರು ಈ ಯೋಜನೆಯ ಸೌಲಭ್ಯವನ್ನು ಒಂದು ವರ್ಷದಲ್ಲಿ ರೂ.4.00 ಲಕ್ಷ ಸಮ್‌ಅಶ್ಯೂರ್ಡ್ ಮೊತ್ತವನ್ನು ಮೀರದಂತೆ ಎಷ್ಟು ಬಾರಿ ಬೇಕಾದರೂ ಕ್ಲೈಮ್ ಮಾಡಬಹುದಾಗಿರುತ್ತದೆ.

## ವಿಮೆ ಪರಿಹಾರ ವ್ಯಾಪ್ತಿಗೆ ಒಳಪಡದ ಸವಲತ್ತುಗಳು

1 ಈ ಯೋಜನೆಯಲ್ಲಿ ಪ್ರಸೂತಿ/ಹೆರಿಗೆಗಳಿಗೆ ಸಂಬಂಧಪಟ್ಟ ವೆಚ್ಚಗಳು ಸೇರಿರುವುದಿಲ್ಲ.

2 ಚಿಕಿತ್ಸೆಗೆ ಸಂಬಂಧಪಟ್ಟಿಲ್ಲದ ಖರ್ಚು ವೆಚ್ಚಗಳಿಗೆ ವಿಮಾ ಸೌಲಭ್ಯ ಸಿಗುವುದಿಲ್ಲ ಅಂದರೆ ದೂರವಾಣಿ ವೆಚ್ಚ, ಟಿವಿ, ಖಾಸಗಿ ನರ್ಸಿಂಗ್, ಆಯಾ, ಕ್ಷೌರಕ್ಕೆ ಸಂಬಂಧಪಟ್ಟಂತೆ, ಡಯಟ್ ಆಹಾರ ಮತ್ತು ಸೌಂಧರ್ಯವರ್ಧಕ ಆಹಾರಗಳು, ಟಿಶ್ಯೂ ಪೇಪರ್, ಡಯ್ಪೆರ್ಸ್, ಶೌಚಾಲಯ ಹಾಗೂ ಇತರೆ ಇದೇ ರೀತಿಯ ಖರ್ಚು, ವೆಚ್ಚ ಸಂಬಂಧಿಸುವುದಿಲ್ಲ ( **All Non Medical Expenses not Payable**)

3 80 ವರ್ಷ ಮೀರಿದ ಸದಸ್ಯ/ಪತ್ನಿ/ಪತಿ/ತಂದೆ/ತಾಯಿ/ಅವಲಂಬಿತ ಸಹೋದರ/ಅವಿವಾಹಿತ ಸಹೋದರಿ/ ಮಗ/ಸೊಸೆ/ಮೊಮ್ಮಕ್ಕಳು (ಮಗನ ಮಕ್ಕಳು)/ ಅವಿವಾಹಿತ ಮಗಳಿಗೆ ಈ ಸೌಲಭ್ಯ ದೊರೆಯುವುದಿಲ್ಲ

4 ಸದಸ್ಯ/ಪತ್ನಿ/ಪತಿ/ತಂದೆ/ತಾಯಿ/ಅವಲಂಬಿತ ಸಹೋದರ/ಅವಿವಾಹಿತ ಸಹೋದರಿ/ ಮಗ/ಸೊಸೆ/ಮೊಮ್ಮಕ್ಕಳು (ಮಗನ ಮಕ್ಕಳು)/ಅವಿವಾಹಿತ ಮಗಳು ಇವರ ವಯೋಮಿತಿ 55 ವರ್ಷ ಮೇಲ್ಪಟ್ಟಿದ್ದರೆ ಆಗ ಆಸ್ಪತ್ರೆಯ ಒಟ್ಟು ಖರ್ಚು ವೆಚ್ಚಗಳಲ್ಲಿ ಶೇಕಡ 5ನ್ನು ಅವರೇ ಭರಿಸಬೇಕಾಗುತ್ತದೆ.

5 ಅಪಘಾತದಿಂದ ಉಂಟಾದ ದಂತ ಚಿಕಿತ್ಸೆಗೆ ಮಾತ್ರ ವಿಮಾ ಸೌಲಭ್ಯ ಬರುತ್ತದೆ.

6 ಯಾವುದೇ ಕಾಯಿಲೆ ಅಥವಾ ಅಪಘಾತದಿಂದ ಮರಣ ಹೊಂದಿದರೆ ಈ ಸೌಲಭ್ಯ ಬರುವುದಿಲ್ಲ, ಆದರೆ ಮರಣ ಹೊಂದುವುದಕ್ಕಿಂತ ಮೊದಲು ನೀಡಿದ ಯಾವುದೇ ಚಿಕಿತ್ಸೆಗೆ ಈ ಸೌಲಭ್ಯ ಅನ್ವಯವಾಗುತ್ತದೆ.

**ರೋಗಿಯು ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಹೊರತು ಪಡಿಸಿ ಬೇರೆ ಆಸ್ಪತ್ರೆಗಳಲ್ಲಿ ಸೇರಿ ಚಿಕಿತ್ಸೆ ಪಡೆದಾಗ ಕ್ಲೈಂಗಾಗಿ ಈ ಕೆಳಕಂಡ ದಾಖಲೆಗಳನ್ನು ಸ್ಪಷ್ಟ ಮತ್ತು ಪರಿಪೂರ್ಣವಾಗಿ ಸಂಘದ ಶಾಖೆಗೆ ನೀಡಬೇಕು**

1 **Reimbursement Claim form 1st part :** ವಿಮಾ ಸೌಲಭ್ಯ ಪಡೆಯುವವರು ಈ ಅರ್ಜಿಯನ್ನು ಸ್ಪಷ್ಟ ಮತ್ತು ಪೂರ್ಣವಾಗಿ ಭರ್ತಿ ಮಾಡಬೇಕು ಮತ್ತು ಚಿಕಿತ್ಸಾ ಮೊತ್ತದ ಮಾಹಿತಿಗಳು ನಿಮ್ಮ ದಾಖಲೆಯನುಸಾರ ಸತ್ಯವಾಗಿರಬೇಕು ಮತ್ತು **Claim form B part** ಅನ್ನು ಚಿಕಿತ್ಸೆ ಪಡೆದ ಆಸ್ಪತ್ರೆಯವರಿಂದ ಕಡ್ಡಾಯವಾಗಿ ಭರ್ತಿ ಮಾಡಿಸಬೇಕು. ಈ ಫಾರಂಗಳು ಸಂಘದ ಎಲ್ಲಾ ಶಾಖೆಗಳಲ್ಲಿ ಮತ್ತು **www.mamcos.info** ದಲ್ಲಿ ಸಿಗುತ್ತದೆ.

2 ಆಸ್ಪತ್ರೆಯಿಂದ ಬಿಡುಗಡೆ ಪತ್ರ (**Discharge Summary**). **Local** ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರೆ ಆ ಆಸ್ಪತ್ರೆಯ ನೋಂದಣಿ ಪ್ರಮಾಣ ಪತ್ರ.

3 ಒಳರೋಗಿ ಚಿಕಿತ್ಸಾ ವೆಚ್ಚದ ಪ್ರತಿ(**Inpatient main Bill & Break up Bill**) ಮತ್ತು ಅದಕ್ಕೆ ಸಂಬಂಧಿಸಿ ಎಲ್ಲಾ ರಶೀದಿಗಳು ಹಾಗೂ **Indoor Case Paper** ವರದಿಗಳು ನೀಡಬೇಕಾಗುತ್ತದೆ.

4 ಸರ್ಜನ್ ಹಾಗೂ ಅನಸ್ತೇಷಿಯಾ ಬಿಲ್ ಮತ್ತು ರಶೀದಿ, ಔಷಧಿ ಚೀಟಿಗಳು (**Prescription**) ಮತ್ತು ಅದಕ್ಕೆ ಸಂಬಂಧಿಸಿದ ಬಿಲ್‌ಗಳು, ವೈದ್ಯರು ನೀಡಿದ ತನಿಖಾ ವರದಿಗೆ ಸಂಬಂಧಿಸಿ ಚೀಟಿಗಳು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಲ್ಯಾಬ್ ರಿಪೋರ್ಟ್‌ಗಳು, ಇ.ಸಿ.ಜಿ, ಎಕ್ಸ್-ರೇ, ಎಂ.ಆರ್.ಐ ಸ್ಕ್ಯಾನ್, ನೀಡಬೇಕಾಗುತ್ತದೆ.

5 ಶಸ್ತ್ರ ಚಿಕಿತ್ಸೆಗೆ ಒಳಪಟ್ಟಲ್ಲಿ ಶಸ್ತ್ರ ಚಿಕಿತ್ಸಾ ವರದಿ ನೀಡಬೇಕಾಗುತ್ತದೆ.

6 ಅಪಘಾತ ಹೊಂದಿ ಚಿಕಿತ್ಸೆ ನೀಡಿಸಿದ್ದಲ್ಲಿ ಕ್ರಸಂ 01 ರಿಂದ 5ರವರೆಗಿನ ಎಲ್ಲಾ ಮೂಲ ಪ್ರತಿ ದಾಖಲೆಗಳು, ಎಫ್.ಐ.ಆರ್ ಹಾಗೂ ಅಪಘಾತಕ್ಕೆ ಸಂಬಂಧಿಸಿದ ವಾಹನದ ಮಾಹಿತಿಗಳು.

7 ಚಿಕಿತ್ಸೆ ನೀಡವಾಗ ಮರಣ ಹೊಂದಿದ್ದಲ್ಲಿ ಕ್ರಸಂ 01 ರಿಂದ 5ರವರೆಗಿನ ಎಲ್ಲಾ ಮೂಲ ಪ್ರತಿ ದಾಖಲೆಗಳು, ಮರಣ ಪ್ರಮಾಣ ಪತ್ರ (ಇದ್ದಲ್ಲಿ) ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸಾ ವೇಳೆ ಮರಣ ಹೊಂದಿದ್ದಕ್ಕೆ ವೈದ್ಯರಿಂದ ಪ್ರಮಾಣ ಪತ್ರ.

8 ಚಿಕಿತ್ಸೆ ಪಡೆದ ರೋಗಿಯ ಆಧಾರಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ನಕಲು ಪ್ರತಿ. ಒಂದು ವೇಳೆ ಚಿಕಿತ್ಸಾ ಅವಧಿಯಲ್ಲಿ ರೋಗಿಯು ಮರಣ ಹೊಂದಿದ್ದರೆ, ಅವರ ಮರಣ ಪ್ರಮಾಣ ಪತ್ರ ಮತ್ತು ಸಂಬಂಧಿಸಿದ ರೋಗಿಯ ವಾರಸುದಾರರ ಬ್ಯಾಂಕ್ ಪಾಸ್‌ಬುಕ್ ನಕಲು ಪ್ರತಿ.

**ಸೂಚನೆ:**

01. ದಿನಾಂಕ 30-6-2021ರೊಳಗೆ ಸದಸ್ಯತ್ವವನ್ನು ಹೊಂದಿದ ಸದಸ್ಯರು ಮಾತ್ರ ಈ ಯೋಜನೆಗೆ ನೋಂದಣಿ ಮಾಡಿಕೊಳ್ಳಲು ಅವಕಾಶವಿದ್ದು, ಅವರು ಈ ಅವಧಿಯಲ್ಲಿ ಸಂಘದ ಉಪವಿಧಿಯಲ್ಲಿ ನಿಗದಿಪಡಿಸಿದ ಕನಿಷ್ಠ ಪ್ರಮಾಣದ ಅಡಿಕೆಯನ್ನಾದರೂ ಸಂಘದಲ್ಲಿ ಕಡ್ಡಾಯವಾಗಿ ಹಾಕಿರಬೇಕು ಹಾಗೂ ಆ ಅಡಿಕೆಯನ್ನು ಸಂಘದಲ್ಲಿ ವಿಕ್ರಯಿಸದೆ ವಾಪಸ್ ಪಡೆಯುವಂತಿಲ್ಲ.

02. ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಕ್ಯಾಶ್‌ಲೆಸ್ ಚಿಕಿತ್ಸೆ ಪಡೆಯುವವರು ಕಡ್ಡಾಯವಾಗಿ ಸಂಘದಿಂದ ನೀಡಿರುವ ಆರೋಗ್ಯ ವಿಮಾ ಕಾರ್ಡ್‌ನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕು.

03. **Reimbursement Claim** ಗೆ ಸಂಬಂಧಿಸಿ ಆಸ್ಪತ್ರೆಯ ಎಲ್ಲಾ ಮೂಲ ದಾಖಲೆಗಳನ್ನು ಸಂಘಕ್ಕೆ ತಲುಪಿಸತಕ್ಕದ್ದು ಹಾಗೂ ಒಂದುವೇಳೆ ಕ್ಲೈಂಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ದಾಖಲೆ ಬೇಕಾದಲ್ಲಿ ಅದನ್ನು ಕಡ್ಡಾಯವಾಗಿ ಸಂಘದ ಶಾಖೆಗಳಿಗೆ ತಲುಪಿಸತಕ್ಕದ್ದು, ಒಟ್ಟಾರೆ ದಾಖಲಾತಿಗಳು ಪೂರ್ಣವಾದಲ್ಲಿ ಕ್ಲೈಂ ಮೊತ್ತ ಪಾವತಿಸಲು ಕನಿಷ್ಠ 30 ರಿಂದ 40 ದಿನಗಳು ಬೇಕಾಗುತ್ತದೆ. ಆದರೆ ಅಪೂರ್ಣ ದಾಖಲೆ ಅಥವಾ ತಪ್ಪು ಮಾಹಿತಿಗಳಿಂದ ಕ್ಲೈಂ ಹಣ ಪಾವತಿಯು ವಿಳಂಭವಾದಲ್ಲಿ ಅರ್ಜಿದಾರ/ಸದಸ್ಯರೇ ಜವಾಬ್ದಾರರಾಗಿರುತ್ತಾರೆ.

04. ಚಿಕಿತ್ಸಾ ಹಣವು ನಿಮ್ಮ ಚಿಕಿತ್ಸಾ ದಾಖಲೆಯಲ್ಲಿಯೇ ಇರುವ ಕಾರಣ, **Reimbursement Claim** ಗೆ ನೀಡುವ ದಾಖಲೆಗಳನ್ನು ಜಾಗರೂಕತೆಯಿಂದ ಇರಿಸಿ ಸಂಘಕ್ಕೆ ನೀಡುವುದು ಹಾಗೂ ಅದರ ನಕಲು ಪ್ರತಿ ನಿಮ್ಮಲ್ಲಿ ಇರಿಸಿಕೊಳ್ಳುವುದು.

05. ಪ್ರಸ್ತುತ ದೇಶದೆಲ್ಲೆಡೆ ಕೋವಿಡ್ ಹರಡುತ್ತಿರುವ ಹಿನ್ನಲೆಯಲ್ಲಿ ನಿಮಗೆ ಆರೋಗ್ಯ ವಿಮಾ ಸೌಲಭ್ಯ ಪಡೆಯುವಲ್ಲಿ ತೊಂದರೆ ಅಥವಾ ತಡವಾದಲ್ಲಿ ಪ್ರಸ್ತುತ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸಂಘಕ್ಕೆ ಮತ್ತು ವಿಮಾ ಕಂಪನಿಯವರಿಗೆ ಸಹಕರಿಸುವುದು.

*ಸದಸ್ಯರು ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ಸಂಘದ ಶಾಖೆ ಅಥವಾ ಏಜೆನ್ಸಿಯನ್ನು ಸಂಪರ್ಕಿಸುವುದರ ಜೊತೆಗೆ ಸಂಘವು ನಿಮ್ಮ ಮತ್ತು ನಿಮ್ಮ ಕುಟುಂಬದ ಹಿತರಕ್ಷಣೆಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿರುವುದನ್ನು ಮನಗಂಡು ಸಂಘದ ಅಭಿವೃದ್ಧಿಗೆ ಹಾಗೂ ಇನ್ನೂ ಹೆಚ್ಚಿನ ಸೇವೆಯನ್ನು ಸದಸ್ಯರಿಗೆ ನೀಡಲು ಅನುಕೂಲವಾಗುವಂತೆ ತಾವು ಬೆಳೆದ ಅಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಸಂಘಕ್ಕೆ ಹಾಕಿ ವ್ಯವಹರಿಸುವ ಮೂಲಕ ಸಂಘದ ಬೆಳವಣಿಗೆಗೆ ಕೈಜೋಡಿಸಲು ವಿನಂತಿಸಿದೆ.*